14229 ನಿ.72-59

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಸೀರ ಅಹ್ಮದ್ ರವರ ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆ

"ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಟೌನ್, ಯಲಹಂಕ ಬೀದಿ, ವಾರ್ಡ್ ಸಂಖ್ಯೆ 5 ರಲ್ಲಿ ವಾಸವಾಗಿರುವ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಗ್ಧ ಅಪ್ರಾಪ್ತ ಹೆಣ್ಣು ಮಗಳ ಮೇಲೆ ಇದೇ ಪ್ರದೇಶದಲ್ಲಿ ವಾಸವಾಗಿರುವ ಚೌಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರ ಸಂಬಂಧಿಕರು ಲೈಂಗಿಕ ಕಿರುಕುಳ ನೀಡಿರುವ ಪ್ರಕರಣ ಕುರಿತು ಈಗಾಗಲೇ ಸ್ಥಳೀಯ ಆರಕ್ಷಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಈವರೆಗೂ ಸಂಬಂಧಪಟ್ಟ ಪೊಲೀಸ್ ಇಲಾಖೆಯು ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ. ರಾಜ್ಯದ ಪ್ರಾಪ್ತ ಮತ್ತು ಅಪ್ರಾಪ್ತ ಹೆಣ್ಣು ಮಕ್ಕಳಿಗೆ ಲೈಂಗಿಕ ಸೂಕ್ತ ರಕ್ಷಣೆ ಒದಗಿಸುವ ಬಗ್ಗೆ".

*****

ಉತ್ತರ: ಶ್ರೀಮತಿ. ಜಮ್ರುದ ರವರು ನೀಡಿದ ದೂರಿನ ಮೇರೆಗೆ ದೇವನಹಳ್ಳಿ ಪೊಲೀಸ್ ಠಾಣಾ ಮೊ.ಸಂ 87/2020 ಕಲಂ: 376(ಎ)(ಬಿ) ಐ.ಪಿ.ಸಿ. ಮತ್ತು ಕಲಂ. 4, 6, ಪೋಕ್ಸೋ ಕಾಯ್ದೆ-2012 ರೀತ್ಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತದೆ. ಪ್ರಕರಣದ ಫಿರ್ಯಾದುದಾರರಾದ ಶ್ರೀಮತಿ. ಜಮ್ರುದ ರವರು ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳ ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ ಹಾಗೂ ಅದೇ ದಿನ ದಿನಾಂಕ: 24.11.2020 ರಂದು ನೊಂದ ಬಾಲಕಿ, 10 ವರ್ಷ ರವರನ್ನು ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ರವರ ಬೆಂಗಾವಲಿನಲ್ಲಿ ವಾಣಿವಿಲಾಸ್ ಆಸ್ಪತ್ರೆಗೆ ಕಳುಹಿಸಿ ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿರುತ್ತದೆ.

ದಿನಾಂಕ:25-11-2020 ರಂದು ಆರೋಪಿ ಪತ್ತೆಗೆ ನೇಮಿಸಿದ್ದ ಸಿಬ್ಬಂದಿಗಳು ಆರೋಪಿ ವೆಂಕಟರಮಣಪ್ಪ ಬಿನ್ ಹನುಮಂತರಾಯಪ್ಪ, 62 ವರ್ಷ ವಾಸ ತಿಮ್ಮಮ ಪಲ್ಲಿ, ಗೂಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಎಂಬಾತನನ್ನು ಹಿಡಿದು ತಂದು ಹಾಜರುಪಡಿಸಿರುತ್ತಾರೆ. ಪ್ರಕರಣದ ಫಿರ್ಯಾದಿರವರು ಆಸಾಮಿಯನ್ನು ನೋಡಿ ಈತನೇ ಕೃತ್ಯ ಎಸಗಿದ ಆಸಾಮಿ ಎಂದು ಗುರುತಿಸಿರುತ್ತಾರೆ. ಆಸಾಮಿಯನ್ನು ಕೂಲಂಕುಶವಾಗಿ ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ನಂತರ ಆರೋಪಿಯನ್ನು ದಸ್ತಗಿರಿ ನಿಯಮಗಳನ್ನು ಅನುಸರಿಸಿ ದಸ್ತಗಿರಿ ಮಾಡಲಾಗಿರುತ್ತದೆ. ಆರೋಪಿಯು ತೋರಿಸಿದ ಮೇರೆಗೆ ಆತನು ಕೃತ್ಯ ಎಸಗಿದ ಸ್ಥಳದ ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ. ನಂತರ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗಾಗಿ ಪೊಲೀಸ್ ಸಿಬ್ಬಂದಿಯವರ ಬೆಂಗಾವಲಿನಲ್ಲಿ ಕಳುಹಿಸಿ ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಲಾಗಿರುತ್ತದೆ. ಅದೇ ದಿನ ಆರೋಪಿಯನ್ನು ಮಾನ್ಯ 2ನೇ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಮಾನ್ಯ ನ್ಯಾಯಾಧೀಶರು ಆದೇಶಿಸಿರುತ್ತಾರೆ. ಆರೋಪಿಯು ಹಾಲಿ ನ್ಯಾಯಾಂಗ ಬಂಧನದಲ್ಲಿರುತ್ತಾನೆ.

ದಿನಾಂಕ:26.11.2020 ರಂದು ಪ್ರಕರಣದಲ್ಲಿ ನೊಂದ ಬಾಲಕಿಯನ್ನು ಮಾನ್ಯ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ ದೇವನಹಳ್ಳಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಕಲಂ 164 ರೀತ್ಯ ಹೇಳಿಕೆ ಪಡೆಯಲಾಗಿರುತ್ತದೆ. ನಂತರ ದಿನಾಂಕ: 27.11.2020ರಂದು ನೊಂದ ಬಾಲಕಿಯನ್ನು, ಮಾನ್ಯ ಅಧೀಕ್ಷಕರು ಮಕ್ಕಳ ಕಲ್ಯಾಣ ಸಮಿತಿ ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಮುಂದೆ ಮಹಿಳಾ ಸಿಬ್ಬಂದಿ ಮೂಲಕ ಹಾಜರುಪಡಿಸಿ ಕೌನ್ಸ್‌ಲಿಂಗ್ ಮಾಡಿಸಲಾಗಿರುತ್ತದೆ.

ದೂರುದಾರರು ನೀಡಿದ ದೂರನ್ನು ಕೂಡಲೇ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತದೆ. ಯಾವುದೇ ರೀತಿಯ ನಿರ್ಲಕ್ಷ್ಯತೆ ವಹಿಸಿರುವುದಿಲ್ಲ. ಪ್ರಕರಣ ಹಾಲಿ ತನಿಖೆಯಲ್ಲಿದ್ದು, ಆದಷ್ಟು ಬೇಗ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿಕೊಳ್ಳಲಾಗುವುದು.

ಮುಂದುವರೆದು, ಮಹಿಳೆಯರ ಮತ್ತು ಹೆಣ್ಣು ಮಕ್ಕಳಿಗೆ ಸುರಕ್ಷತೆ ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**HD 29 SDN 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಸೀರ ಅಹ್ಮದ್ ರವರ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದ ಅನುಬಂಧ

1. ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಸಹಾಯಕ್ಕಾಗಿ **ಮಹಿಳಾ ಸಹಾಯವಾಣಿ ಸಂಖ್ಯೆ: 1091 ಮತ್ತು 22943225** ಮತ್ತು ಮಕ್ಕಳ ಕುಂದುಕೊರತೆ ಕೇಳಲು ಹಾಗೂ ಅವರ ಸಹಾಯಕ್ಕಾಗಿ **ಮಕ್ಕಳ ಸಹಾಯವಾಣಿ ಸಂಖ್ಯೆ 1098 ಮತ್ತು 22943224** ತೆರೆಯಲಾಗಿದೆ.

2. ಹಳ್ಳಿಗಳಲ್ಲಿ ಗ್ರಾಮಸಭೆ, ತೆರದ ಮನೆ ಕಾರ್ಯಕ್ರಮಗಳು, ನಗರಗಳಲ್ಲಿ ಇತರೆ ಸಾರ್ವಜನಿಕ ಸಭೆಗಳಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಮಹಿಳೆಯರ ಮೇಲಿನ ಮತ್ತು ಮಕ್ಕಳ ಮೇಲಿನ ಅತ್ಯಾಚಾರ/ಲೈಂಗಿಕ ದೌರ್ಜನ್ಯ ದಂತಹ ಹೀನಾಯ ಕೃತ್ಯಗಳು ಘಟಿಸಲು ಕಾರಣ ಅದನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಮಹಿಳೆಯರಿಗೆ, ಬಾಲಕಿಯರಿಗೆ ಹಾಗು ಪೋಷಕರುಗಳಿಗೆ ಮಾಹಿತಿ ನೀಡಲಾಗುತ್ತಿದೆ.

3. ಬೆಂಗಳೂರು ಮಹಾ ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿಯೇ ಪಿಂಕ್ ಹೊಯ್ಸಳ ವಾಹನಗಳನ್ನು ಗಸ್ತಿಗಾಗಿ ನಿಯೋಜಿಸಿದ್ದು, ಈ ವಾಹನಗಳಲ್ಲಿ ಮಹಿಳಾ ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ. ಈ ವಾಹನಗಳು ವಿಶೇಷವಾಗಿ ಶಾಲಾ ಕಾಲೇಜುಗಳು, ಗಾರ್ಮೆಂಟ್ಸ್ ಕಾರ್ಖಾನೆಗಳು, ದೇವಾಲಯಗಳು ಮತ್ತು ಜನನಿಬಿಡ ಷಾಪಿಂಗ್ ಸ್ಥಳಗಳಲ್ಲಿ ಗಸ್ತು ನಿರ್ವಹಿಸುತ್ತಿವೆ.

4. ರಾಜ್ಯದ ಇತರೆ ನಗರ/ಜಿಲ್ಲೆಗಳಲ್ಲಿ ಮಹಿಳೆ ಮತ್ತು ಹೆಣ್ಣು ಮಕ್ಕಳ ಸುರಕ್ಷತೆಗಾಗಿ ವಿಶೇಷ ಗಸ್ತು ವಾಹನಗಳನ್ನು ಚಾಲ್ತಿಗೆ ತಂದಿದ್ದು, ಇದರ ಉಸ್ತುವಾರಿಗೆ ಒಬ್ಬರು ಮಹಿಳಾ ಪೋಲೀಸ್ ಅಧಿಕಾರಿಯನ್ನು ಹಾಗೂ ಮಹಿಳಾ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಸದರಿ ವಾಹನವು ಹೆಚ್ಚಾಗಿ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಓಡಾಡುವ ಸಾರ್ವಜನಿಕ ಸ್ಥಳಗಳಲ್ಲಿ ಗಸ್ತಿನಲ್ಲಿರುತ್ತದೆ.

5. ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರದ ಅಧಿಸೂಚನೆ ಆದೇಶ ಸಂಖ್ಯೆ : ಹೆಚ್‌ಡಿ 192 ಪಿಪಿಪಿ(1) 2016, ದಿನಾಂಕ: 28/11/2016 ರನ್ವಯ ನಗರ ಮತ್ತು ಜಿಲ್ಲೆಗಳಲ್ಲಿ 35 ಮಹಿಳಾ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗಿದೆ.

6. ಹೆಚ್ಚಿನ ಜನ ನಿಬಿಡ ಪ್ರದೇಶಗಳಾದ ಬಸ್‌ನಿಲ್ದಾಣ, ರೈಲ್ವೇ ನಿಲ್ದಾಣ, ಸರ್ಕಲ್‌ಗಳು, ಮುಖ್ಯ ರಸ್ತೆಗಳು ಹಾಗೂ ಶಾಪಿಂಗ್ ಸ್ಥಳಗಳಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಸಿಸಿಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ.

7. ಅತ್ಯಾಚಾರ, ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯ, ಪ್ರಕರಣಗಳಲ್ಲಿ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಲು ಹಾಲಿ ಇರುವ ಐಪಿಸಿ ಮತ್ತು ಸಿಆರ್‌ಪಿಸಿಗಳಡಿಯಲ್ಲಿ ಕಾನೂನುಗಳಿಗೆ ತಿದ್ದುಪಡಿ ಮಾಡಲಾಗಿರುತ್ತದೆ ದಂಡ ವಿಧಿ, (ತಿದ್ದುಪಡಿ) ಅಧಿನಿಯಮ ಸುಗ್ರೀವಾಜ್ಞೆ-2018 ರೀತ್ಯಾ ಅತ್ಯಾಚಾರ/ಲೈಂಗಿಕ ಕಿರುಕುಳದಂತಹ ಅಪರಾಧಗಳಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಲಾಗಿರುತ್ತದೆ ಹಾಗೂ ತನಿಖಾ ಅವಧಿಯನ್ನು 90 ದಿನಗಳಿಂದ 60 ದಿನಗಳಿಗೆ ಇಳಿಸಿ ತಿದ್ದುಪಡಿ ಮಾಡಲಾಗಿರುತ್ತದೆ.

8. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಚೈಲ್ಡ್ ಪೋರ್ನೋಗ್ರಫಿ ವಿಷಯವಾಗಿ ದಿನಾಂಕ:16-09-2020 ರಂದು ಸ್ಥಾಯಿ ಆದೇಶವನ್ನು ಎಲ್ಲಾ ಘಟಕಾಧಿಕಾರಿಗಳಿಗೆ ಹೊರಡಿಸಲಾಗಿರುತ್ತದೆ.

9. ಮಹಿಳೆಯ ಮತ್ತು ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ/ಅತ್ಯಾಚಾರ ಪ್ರಕರಣಗಳ ವಿಚಾರಣೆಗಾಗಿ ಸರ್ಕಾರವು ಆದೇಶದ ಸಂಖ್ಯೆ: ಲಾ/28/ಎಸ್‌ಸಿಐ/2014, ದಿ.23/4/2014 ರಲ್ಲಿ ಬೆಂಗಳೂರು ನಗರವೂ ಸೇರಿದಂತೆ "30 ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯ"ಗಳನ್ನು ಮಂಜೂರು ಮಾಡಿರುತ್ತದೆ.

10. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ/329/ಪಿಪಿಇ/2014, ದಿ.11/12/2014 ರಲ್ಲಿ, ವಿವಿಧ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯಗಳಲ್ಲಿ ವಿಶೇಷವಾಗಿ ಪೋಕ್ಸೋ ಪ್ರಕರಣಗಳಿಗೆ ಸಂಬಂಧಿಸಿದಂತೆ "29 ವಿಶೇಷ ಸರ್ಕಾರಿ ಅಭಿಯೋಜಕ"ರನ್ನು ನೇಮಿಸಿ ಆದೇಶ ಹೊರಡಿಸಿರುತ್ತದೆ.